


**ಕಿಟ್ಟ:** ನಿನಗಿಂತ ನನ್ನ ಬಳಿಯೇ ಫ್ಯಾನ್‌ಗಳು ಜಾಸ್ತಿ.
**ಗುಂಡ:** ಅದೇನ್ ದೊಡ್ಡ ವಿಷಯವಲ್ಲ ಬಿಡು. ನಮ್ಮ ಮನೆಯ ಪ್ರತಿ ರೂಮಿನಲ್ಲೂ ಎಸಿಗಳು ಇವೆ.

**ಗುಂಡ:** ಇವತ್ತು ಸಿನಿಮಾ ನೋಡೋಕೆ ಹೋಗೋಣವೇ?
**ಕಿಟ್ಟ:** ಡಾಕ್ಟರ್ ಹತ್ತಿರ ಅಪಾಯಿಂಟ್ಮೆಂಟ್ ಇದೆ.
**ಗುಂಡ:** ಫೋನ್ ಮಾಡಿ, 'ನನಗೆ ಹುಷಾರಿಲ್ಲ, ಅಪಾಯಿಂಟ್ಮೆಂಟ್ ಕ್ಯಾನ್ಸಲ್ ಮಾಡಿ' ಅಂತೇಳು.




ಗುಂಡ ಹಾಗೂ ಕಿಟ್ಟ ಹೋಗುತ್ತಿರುವಾಗ ₹2000 ರೂಗಳ ನೋಟು ರಸ್ತೆಯಲ್ಲಿ ಬಿದ್ದಿರುವುದನ್ನು ನೋಡಿದರು.
**ಗುಂಡ:** ಏನು ಮಾಡೋಣ ಈಗ?
**ಕಿಟ್ಟ:** 50:50 ಹಂಚಿಕೊಳ್ಳೋಣ.
**ಗುಂಡ:** ಹಾಗಾದ್ರೆ, ಮಿಕ್ಕ ₹1900 ಏನು ಮಾಡೋದು?

**ಗುಂಡ:** ಇವತ್ತು ಎಮ್ಮೆ ಮೊಟ್ಟೆ ಇಟ್ಟಿತು.
**ಕಿಟ್ಟ:** ಅಯ್ಯೋ ಪೆದ್ದ ಎಮ್ಮೆ ಎಲ್ಲಾದ್ರೂ ಮೊಟ್ಟೆ ಇಡುತ್ತಾ?
**ಗುಂಡ:** ಯಾಕೆ ಇಡಲ್ಲ. (ಎಮ್ಮೆ ಎಂದು ಹೆಸರಿಟ್ಟಿದ್ದ ಕೋಳಿ ತೋರಿಸಿ) ಇದೇ ನೋಡು ಮೊಟ್ಟೆ ಇಟ್ಟ ನನ್ನ ಎಮ್ಮೆ.



ಗುಂಡ ಕಿಟ್ಟನಿಗೆ ನ್ಯೂಸ್ ಪೇಪರ್ ಓದಿ ಹೇಳುತ್ತಿದ್ದ. ಅದು ಅವನ ಪ್ರತಿನಿತ್ಯದ ರೂಢಿಗಳ್ಲೊಂದು.
ಸುದ್ದಿಯೊಂದು ಹೀಗಿತ್ತು...
**ಗುಂಡ:** ಭಾರತದ ಲಾಂಗ್ ಜಂಪ್ ಆಟಗಾರನೊಬ್ಬ ಚಿನ್ನದ ಪದಕ ಕಳೆದುಕೊಂಡಿದ್ದಾರೆ.
**ಕಿಟ್ಟ:** ಅಯ್ಯೋ...
**ಗುಂಡ:** ಅಯ್ಯೋ ಅಂತ ಯಾಕೆ ಕರುಣೆ ತೋರುತ್ತೀಯಾ ಬಿಡು. ಅವರು ಲಾಂಗ್ ಜಂಪ್ ಮಾಡುವಾಗ ಚಿನ್ನದ ಪದಕ ಯಾಕೆ ಹಾಕಿಕೊಳ್ಳಬೇಕಿತ್ತು?

ಸಂಗ್ರಹ:
**ಪೂರ್ಣಿಮಾ ರವೀಂದ್ರನಾಥ್, ಉಡುಪಿ**



ರಾತ್ರಿ ಎರಡು ಗಂಟೆಗೆ ಕುಡಿದು ಬಂದ ಗಂಡನನ್ನು ನೋಡಿದ ಹೆಂಡತಿ ಪೊರಕೆಯನ್ನು ಕೈಯಲ್ಲಿ ಹಿಡಿದು ಅವನ ಮುಂದೆ ನಿಲ್ಲುತ್ತಾಳೆ. ಅದನ್ನು ಕಂಡ ಅವಳ ಗಂಡ, 'ಎಷ್ಟು ಅಂತ ಕೆಲಸ ಮಾಡ್ತಿಯಾ ಚಿನ್ನ. ಕಸ ಗುಡಿಸಿದ್ದು ಸಾಕು. ಹೋಗಿ ಮಲ್ಕೊ' ಅಂದ. ಅವಳ ಕೋಪ ಜರ್‍ರನೆ ಇಳಿದು, ನಕ್ಕು ಒಳ ಕರೆದೊಯ್ದಳು.

ಪೆಟ್ರೋಲ್ ಹಾಕಿಸಿಕೊಳ್ಳೋಕೆ ಮೂವತ್ತು ನಿಮಿಷ ಸರದಿಯಲ್ಲಿ ನಿಂತಿದ್ದ ಗುಂಡನಿಗೆ ಕೊನೆಗೂ ಅವನ ಪಾಳಿ ಬಂತು. ಪೆಟ್ರೋಲ್ ಬಂಕ್ ಹುಡುಗ, 'ಸರ್ ನಿಮ್ದು ಎಲೆಕ್ಟ್ರಿಕ್ ಬೈಕ್' ಅಂದ.

**ಅಮ್ಮ:** ವಾಟ್ಸ್‌ಆ್ಯಪ್‌ನಲ್ಲಿ ಆಮಂತ್ರಣ ಪತ್ರಿಕೆ ಯಾರಿಗೂ ಕಳಿಸುವುದು ಬೇಡ ಅನಿಸ್ತಿದೆ.
**ಲೋಕೇಶ:** ಯಾಕಮ್ಮ ಏನಾಯಿತು?
**ಅಮ್ಮ:** ಬೆಳಗ್ಗೆಯಿಂದ ಇಪ್ಪತ್ತು ಜನಕ್ಕೆ ಕಳುಹಿಸಿದ್ದೀನಿ. ಹದಿನೈದು ಜನ ಲೋಕೇಶನನ್ನ ಕಳ್ಸಿ ಅಂತ ಕೇಳಿದ್ದಾರೆ. ಎಷ್ಟು ಕಡೆಗಂತ ನಿನನ್ನು ಕಳಿಸೋದು?
**ಲೋಕೇಶ:** ಅಯ್ಯೋ... ಅಮ್ಮ ಅದು ಲೋಕೇಶ ಅಲ್ಲ ಲೊಕೇಷನ್. ಅಡ್ರೆಸ್ ಕಳ್ಸಿ ಅಂತ.

***

**ಗಂಡ:** ನಿಮ್ಮಪ್ಪ ಉರಿಯೊ ಗಾಯಕ್ಕೆ ಉಪ್ಪು ಹಾಕೋದು ಇನ್ನೂ ಬಿಟ್ಟಿಲ್ವಾ?
**ಹೆಂಡತಿ:** ಯಾಕ್ರೀ. ಏನಾಯ್ತು?
**ಗಂಡ:** ಇವತ್ತು ಮತ್ತೆ ಕೇಳ್ತಿದ್ದಾರೆ, ನನ್ನ ಮಗಳ ಮದುವೆ ಆಗಿ ಖುಷಿಯಾಗಿದ್ದೀರಾ ತಾನೇ ಅಂತ.

ಸಂಗ್ರಹ: ಶರದ ಕುಲಕರ್ಣಿ, ಬೀದರ್